JULY 10, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಭಾರತದ ಪ್ರಗತಿಯಲ್ಲಿ, ಕರ್ನಾಟಕ ನೂತನ ಮೈಲಿಗಲ್ಲನ್ನು ಸಾಧಿಸಿದೆ. ವಿಶ್ವ ಬ್ಯಾಂಕ್‌ನ ಮೇಲ್ ಮಧ್ಯಮ ವರ್ಗದ ತಲಾ ಆದಾಯದ ಮಿತಿಯನ್ನು ಮೀರಿ, ಕರ್ನಾಟಕದ ತಲಾ ಆದಾಯ, 5 ಲಕ್ಷದ 31 ಸಾವಿರ ರೂಪಾಯಿ ದಾಟಿರುವುದು, ಅಭಿವೃದ್ಧಿಯ ಪಯಣದಲ್ಲಿ, ಮಹತ್ವದ ಹೆಜ್ಜೆಯಾಗಿದೆ ಎಂದು, ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ತಂತ್ರಜ್ಞಾನ, ಸ್ಟಾರ್ಟ್ ಅಪ್‌ಗಳು ಮತ್ತು ಐ.ಟಿ. ಸೇವೆಗಳು, ಭಾರತದ ಭವಿ ್ಯದ ಆರ್ಥಿಕತೆಯನ್ನು ಮುನ್ನಡೆಸುತ್ತಿವೆ. ಗ್ಯಾರಂಟಿ ಯೋಜನೆಗಳು, ಕುಟುಂಬದ ಆದಾಯ ಹಾಗೂ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿವೆ. ಖರ್ಚನ್ನು ಕಳೆದು, ರಾಜ್ಯದೊಳಗೆ ಉತ್ಪತ್ತಿಯಾಗುವ ಸೇವೆಗಳ ಒಟ್ಟು ಮೌಲ್ಯ ಶೇಕಡ 68 ಕ್ಕಿಂತ ಹೆಚ್ಚಿದೆ, ಎಂದಿದ್ದಾರೆ.

<><><>

ಬ್ಯಾಂಕಿಂಗ್ ಪರೀಕ್ಷೆಗಳನ್ನು, ಕನ್ನಡ ಸೇರಿದಂತೆ, 22 ಭಾ ಿಗಳಲ್ಲಿ ನಡೆಸುವಂತೆ, ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಡಾಕ್ಟರ್ ಪುರು ೋತ್ತಮ ಬಿಳಿಮಲೆ, ತಿಳಿಸಿದ್ದಾರೆ. ಚಾಮರಾಜನಗರದಲ್ಲಿ, ಮಾತನಾಡಿದ ಅವರು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಭಾಷಿಕ ಸಿಬ್ಬಂದಿ, ಅಧಿಕಾರಿಗಳು ಹೆಚ್ಚಿರುವ ಹಿನ್ನೆಲೆ, ಗ್ರಾಮೀಣ ಭಾಗದ ಜನರಿಗೆ, ಸುಗಮವಾಗಿ ವ್ಯವಹರಿಸಲು, ಕಷ್ಟವಾಗುತ್ತಿದೆ. ರಾಜ್ಯದ ಬ್ಯಾಂಕ್‌ಗಳಲ್ಲಿ ಶೇಕಡ 100ರ ್ಟ ಕನ್ನಡಿಗರು ಇರಬೇಕು, ಎಂದರು. ರಾಜ್ಯದ 19 ಸಾವಿರದ 700 ಸರ್ಕಾರಿ ಶಾಲೆಗಳಿಗೆ, ಖಾತಾ ಪತ್ರವೇ ಇಲ್ಲ ಎಂಬುದನ್ನು, ಗಂಭೀರವಾಗಿ ಪರಿಗಣಿಸಲಾಗಿದೆ ಎಂದು, ಹೇಳಿದರು.

<><><>

ಕಾರ್ಯನಿರತ ಸ್ಥಳಗಳಲ್ಲಿ, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ, ಜಾಗೃತಿ ಕಾರ್ಯಾಗಾರ, ಆಕಾಶವಾಣಿ ಧಾರವಾಡ ಕೇಂದ್ರದ ಸಿಬ್ಬಂದಿಗಾಗಿ, ಶಾಲ್ಮಲಾ ಸಭಾಂಗಣದಲ್ಲಿ ಜರುಗಿತು. ಕರ್ನಾಟಕ ವಿಶ್ವವಿದ್ಯಾಲಯದ, ಸರ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯೆ, ಡಾಕ್ಟರ ಎಸ್.ಆರ್ ಮಂಜುಳಾ ಹಾಗೂ ರ್‍ಯಾಪಿಡ್ ಸ್ವಯಂಸೇವಾ ಸಂಸ್ಥೆಯ, ಕಾರ್ಯದರ್ಶಿ ವಾಣಿ ಪುರೋಹಿತ, ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದರು. ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ, ಕಾರ್ಯಕ್ರಮ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ ಹಾಗೂ ವಿವಿಧ ವಿಭಾಗಗಳ ಸಿಬ್ಬಂದಿ, ಲಿಂಗ ಸಂವೇದನೆ, ಲಿಂಗ ಸೂಕ್ಷ್ಮತೆ ಹಾಗೂ ಕಾರ್ಯನಿರತ ಸ್ಥಳಗಳಲ್ಲಿ, ಮಹಿಳೆಯರೊಂದಿಗೆ ಘನತೆಯ ನಡಾವಳಿ ಕುರಿತ, ಸಂವಾದದಲ್ಲಿ ಪಾಲ್ಗೊಂಡರು. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ, ವಾಣಿ ಪುರೋಹಿತ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ವಾಣಿ ಪುರೋಹಿತ ಧ್ವನಿ– 43 ಸೆಕೆಂದುಗಳು

<><><>

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ, ಕೇಂದ್ರ ಕಾರ್ಯಾಲಯ, ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ತಂಡಗಳಿಗೆ, ಪ್ರತಿಷ್ಠಿತ ಚತುರ್ಥ ಚರಣ್, ಹೀರಕ್ ಪಂಖ್ ಹಾಗೂ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು, ಇಂದು ಸಂಜೆ ನಾಲ್ಕು ಗಂಟೆಗೆ, ಬೆಂಗಳೂರಿನ ಲೋಕಭವನದ ಗಾಜಿನ ಮನೆಯಲ್ಲಿ, ಆಯೋಜಿಸಿದೆ.

<><><>

ಗದಗ ಜಿಲ್ಲೆಯಲ್ಲಿ, ಶೇಕಡ 22 ದಶಾಂಶ 3ರ  ಷ್ಟು, ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಬಿತ್ತನೆಯಾದ ಹೆಸರು, ಮುಸುಕಿನ ಜೋಳ, ಹತ್ತಿ, ಸೂರ್ಯಕಾಂತಿ ಹಾಗೂ ನೆಲಗಡಲೆ ಬೆಳೆಗಳು, ತೇವಾಂಶದ ಕೊರತೆಯಿಂದಾಗಿ, ಸಂಪೂರ್ಣ ಕುಂಠಿತಗೊಂಡಿವೆ ಎಂದು, ಕೃಷಿ ಇಲಾಖೆ, ಜಂಟಿ ನಿರ್ದೇಶಕಿ, ಚೇತನಾ ಪಾಟೀಲ ತಿಳಿಸಿದ್ದಾರೆ.ಜಿಲ್ಲೆಯಲ್ಲಿ ಈ ವರೆಗೆ, 2 ಲಕ್ಷ 39 ಸಾವಿರದ 280 ಹೆಕ್ಟರ್ ಭೂಮಿಯಲ್ಲಿ  ಬಿತ್ತನೆಯಾಗಿದೆ. 74 ಸಾವಿರದ 439 ಹೆಕ್ಟರ್ ಭೂಮಿಯಲ್ಲಿ ಬಿತ್ತನೆ ಬಾಕಿ ಇದೆ. ರೈತರು ಪರ್ಯಾಯ ಬೆಳೆಗಳೊಂದಿಗೆ, ಕೃಷಿ ಇಲಾಖೆ ನೀಡುವ ತಾಂತ್ರಿಕ ಸಲಹೆಗಳನ್ನು ಅನುಸರಿಸುವಂತೆ, ಅವರು ಕೋರಿದ್ದಾರೆ.

<><><>

ಕೇಂದ್ರದ ಮಹತ್ವಾಕಾಂಕ್ಷಿ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯ, ಸಮರ್ಪಕ ಅನುಷ್ಠಾನಕ್ಕಾಗಿ, ಕಲಬುರಗಿ ಜಿಲ್ಲೆಯ ಅಧಿಕಾರಿಗಳಿಗೆ, ತರಬೇತಿ ಕಾರ್ಯಾಗಾರ ಜರುಗಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಉಪ ನಿರ್ದೇಶಕ ರಾಜಕುಮಾರ, ಕಾರ್ಯಾಗಾರಕ್ಕೆ ಚಾಲನೆ ನೀಡಿದರು.

<><><>

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಕಾಮಾಲೆ ಹಾಗೂ ಡೆಂಘೀ ಜ್ವರ ಕಾಯಿಲೆ ಕಂಡುಬಂದಿದೆ. ದಕ್ಷಿಣಕನ್ನಡ ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಎಚ್.ಆರ್. ತಿಮ್ಮಯ್ಯ, ಅಗತ್ಯ ಮುನ್ನೆಚ್ಚರಿಕೆ ಕೈಗೊಳ್ಳುವಂತೆ, ಮನವಿ ಮಾಡಿದ್ದಾರೆ. ಮಂಗಳೂರು ತಾಲೂಕಿನಲ್ಲಿ, ಕಳೆದ ಜೂನ್ ಅಂತ್ಯದ ವರೆಗೆ 35 ಹೆಪಟೈಟೀಸ್ ಎ ಮತ್ತು ಇ ಪ್ರಕರಣಗಳು ದಾಖಲಾಗಿವೆ, ಎಂದು ಮಾಹಿತಿ ನೀಡಿದ್ದಾರೆ. ಈಗಾಗಲೇ 832 ಮನೆಗಳಿಗೆ ಭೇಟಿ ನೀಡಿ, ಆರೋಗ್ಯ ಶಿಕ್ಷಣ ನೀಡಲಾಗಿದೆ. 40 ಸ್ಥಳದಲ್ಲಿ ನೀರಿನ ಮಾದರಿ ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸಲಾಗಿದೆ. ಬಾವಿ ನೀರಿನ ಕ್ಲೋರಿನೇಶನ್ ಮಾಡಲಾಗುತ್ತಿದೆ ಎಂದು, ಅವರು ತಿಳಿಸಿದ್ದಾರೆ.

<><><>

ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆ ಹಿನ್ನೆಲೆ, ಮಂಡ್ಯ ಜಿಲ್ಲೆ ಕೃಷ್ಣ ರಾಜ ಸಾಗರ ಅಣೆಕಟ್ಟಿನ ನೀರಿನ ಸಂಗ್ರಹ 85 ದಶಾಂಶ 5 ಅಡಿಗಳಿಗೆ ಏರಿಕೆಯಾಗಿದೆ. ಮಾಜಿ ಶಾಸಕ ಶ್ರೀಕಂಠಯ್ಯ ಮಂಡ್ಯ ತಾಲೂಕು, ಸಂತೆ ಕಲಸಗೆರೆ ಗ್ರಾಮಕ್ಕೆ ಭೇಟಿ ನೀಡಿ ಕಬ್ಬು ಹಾಗೂ ತೆಂಗು ಬೆಳೆಗಳನ್ನು ವೀಕ್ಷಿಸಿದರು. ಅಣೆಕಟ್ಟೆಯಲ್ಲಿ 74 ಅಡಿಗಳಿಗಿಂತ ಹೆಚ್ಚು ನೀರು ಸಂಗ್ರಹವಾಗಿರುವ ಹಿನ್ನೆಲೆ, ಸರ್ಕಾರ, ಕೃಷಿ ನೀರಾವರಿಗಾಗಿ ಅಣೆಕಟ್ಟು ನೀರನ್ನು ಹರಿಸುವಂತೆ ಆಗ್ರಹಿಸಿದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಭೈರಿ ದೇವರಕೊಪ್ಪದ, ಶ್ರೀ ಜಗಜ್ಯೋತಿ ಬಸವೇಶ್ವರ ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಕೇಂದ್ರ – ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸಹಯೋಗದಲ್ಲಿ, 9 ಎಕರೆ ವಿಸ್ತೀರ್ಣದಲ್ಲಿ, ಹುಬ್ಬಳ್ಳಿ–ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರ, ಸ್ಥಾಪಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>